ಓ.ಎಸ್. 450/2017
ಪಿ.ಡಬ್ಲ್ಯೂ-1

ದಿನಾಂಕಃ **02.08.2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ.ಸಿ.ಎನ್. ವಕೀಲರಿಂದಃ

ಪ್ರತಿವಾದಿ 2015 ರಲ್ಲಿ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ, ಆದರೆ ದಿನಾಂಕ ಹೇಳಲು ಆಗುವುದಿಲ್ಲ. ಕರಾರು ಪತ್ರವನ್ನು ಸುಬ್ರಹ್ಮಣ್ಯ ಟಿ ಎನ್ನುವವರು ತಂದಿರುತ್ತಾರೆ. ಕರಾರು ಪತ್ರವನ್ನು 100 ರೂ. ಮುಖಬೆಲೆಯ ಎರಡು ಛಾಪಾಕಾಗದಗಳ ಮೇಲೆ ಬರೆದಿರುತ್ತಾರೆ. ಛಾಪಾ ಕಾಗದವನ್ನು ಮಧುಗಿರಿಯಲ್ಲಿ ಖರೀದಿ ಮಾಡಿರುತ್ತಾರೆ. ಕರಾರು ಪತ್ರವನ್ನು ಎಲ್ಲಿ ಬರೆದಿರುತ್ತಾರೆ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಪ್ರತಿವಾದಿ ಮಧುಗಿರಿಯ ತಾಲ್ಲೂಕು ಕಛೇರಿಯ ಹತ್ತಿರ ಬರೆಸಿಕೊಂಡು ಬಂದಿರುತ್ತೇನೆ ಎಂದು ನನಗೆ ತಿಳಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಕರಾರು ಪತ್ರವನ್ನು ತಯಾರು ಮಾಡುವ ಸಮಯದಲ್ಲಿ ನಾನು ಹಾಜರು ಇರಲಿಲ್ಲ.

**2.** ಕರಾರು ಪತ್ರಕ್ಕೆ ಶಾನಗಾನಹಳ್ಳಿ ಪ್ರಭಾಕರ ರೆಡ್ಡಿ ಮತ್ತು ತೊಂಡೋಟಿ ರಂಗಾರೆಡ್ಡಿ ಮಾತ್ರ ಸಹಿಗಳನ್ನು ಮಾಡಿರುತ್ತಾರೆ. ಕರಾರು ಪತ್ರವನ್ನು ಬರೆದ ದಿನದಂದೇ ಮಧುಗಿರಿಯ ತಹಶೀಲ್ದಾರ್ ಕಛೇರಿಯ ಹತ್ತಿರ ನನಗೆ ಕೊಟ್ಟಿರುತ್ತಾರೆ. ನಾನು ವಾದಿಗೆ ಒಟ್ಟು 3,00,000/- ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಒಮ್ಮೆ ರೂ. 2,00,000/- ನಂತರ ರೂ. 50,000/-, ನಂತರ ರೂ. 5,000/- ನಂತರ ರೂ.5,000/- ಮತ್ತು ರೂ.10,000/- ಪಾವತಿಸಿರುತ್ತೇನೆ. ಸದರಿ ಹಣವನ್ನು ಯಾವ ದಿನಾಂಕದಂದು ಪಾವತಿಸಿರುತ್ತೇನೆ ಎಂದು ನೆನಪಿರುವುದಿಲ್ಲ.

**3.** ನಿಪಿ-1 ರಲ್ಲಿ ತಿದ್ದುಪಡಿಯಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಟೈಪ್ ಮಾಡಿದವರೇ ಮಾಡಿರುತ್ತಾರೆ. ನಾವು ತಿದ್ದುಪಡಿ ಮಾಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಿಪಿ-1 ಕ್ಕೆ ಪ್ರತಿವಾದಿ ಸಹಿ ಮಾಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾನು ಮತ್ತು ಸಾಕ್ಷಿದಾರರು ಸೇರಿಕೊಂಡು ನಿಪಿ-1 ನ್ನು ಸೃಷ್ಟಿ ಮಾಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ನಿಪಿ-1 ಕ್ಕೆ ಪ್ರತಿವಾದಿ ಸಹಿಯನ್ನು ಬೇರೆಯವರ ಕಡೆಯಿಂದ ಮಾಡಿಸಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಗೆ ಸೇರಿರುವುದಿಲ್ಲ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ